ನಗರ ಡಿವೀಜ್ಯ ಡಿಸ್ಟ್ರಿಕ್ಟ್ ಜಡ್ಜ್ರೀಯವರಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 75.

ಮೃತಪಟ್ಟ ರಾಯಸದ ಶೇಷಯ್ಯನಆಸ್ತೀ ವಿಷಯದಲ್ಲಿ—

ಅರ್ಜೀದಾರ ರಾಯಸದ ವೆಂಕಟರಮಣ ಮತ್ತು ಲಕ್ಷ್ಮಣ್ಣ, ಮೃತಪಟ್ಟ ಸದರೀ ರಾಯಸದ ಶೇಷಯ್ಯನಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ತರೀಕೆರೆ ಸ್ಥಳದ ಮೈನರ್ ವೆಂಕಟರಮಣನು ಮತ್ತು ಲಕ್ಷ್ಮಣ್ಣ ಇವರ ಗಾರ್ಡಿಯ್ಯ ಲಕ್ಷ್ಮಮ್ಮನು, ತರೀಕೆರೆ ವಾಸಸ್ಥನಾಗಿ ಮೃತಪಟ್ಟ ರಾಯಸದ ಶೇಷಯ್ಯನ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮಮನ ಅರ್ಜೀಯನ್ನು 1887ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 16ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಯಸದ ಶೇಷಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಆಗಸ್ಟು ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತಿನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಕೊಡಗು.

ನೋ ೀ ಟಿ ಸ್.

ತಾರೀಖು 1ನೇ ಆಗಸ್ಟ್ 1887.

ಕೊಡಗು ಫಾರೆಸ್ಟ್ ಉತ್ಪತ್ತೀ ಬಾಬತು ಈ ಕೆಳಗೆ ಕಂಡ ನಾಟೂ ವಗೈರೇ ಸಾಮಾನುಗಳು ಸ್ರ 1887ನೇ ಇಸವಿ ಸೆಪ್ಟಂಬರ್ ತಾರೀಖು 1ರಲ್ಲು ಹುಣಸೂರಲ್ಲಿ ಹರಾಜ್ ಮೂಲಕ್ಕ ವಿಕ್ರಯಿಸಲ್ಪಡುತ್ತವೆ.

1115	ನಾಟೂಗಳು	ತ್ಯಾಗ	30355	ಸಲಿ ಅಡಿ
10	ಕುಯಿದ ಬೂಬತು	ಸದರೀ	449	,,
63	ಹಲಿಗೆಗಳು	ಸದರೀ	559	,,
167	ನಾಟೂಗಳು	ಹೊನ್ನೆ	3442	,,
38	ಸದರೀ	ಬೀಟೆ	877	,,
32	ಸದರೀ	ನಂದಿ	755	,,
144	ಸದರೀ	ಮತ್ತೀ ವಗೈರೆ	3266	,,

25 ಗಾಡಿ ಜೋಜಾ ತ್ಯಾಗದ ಸರಗಳು.

ಮೈಸೂರಿಂದ ಹುಣಸೂರಿಗೆ ಸಲೀಸಾಗಿ ತಲಪಬಹದು. ಅಲ್ಲಿಂದ ಅಲ್ಲಿಗೆ 27 ಮೈಲ್ ದೂರವಿದೆ, ಮತ್ತು ವಳ್ಳೀ ರಸ್ತೆಯೂ ಇರುತ್ತದೆ.

ತ್ಯಾಗದ ನಾಟೂಗಳಲ್ಲಿ ದೊಡ್ಡ ತೊಲೆಗಳು ಅನೇಕ ಇರುತ್ತವೆ. ಕಳದ ಎರಡು ಹರಾಜುಗಳಲ್ಲಿ ತ್ಯಾಗ ಸಲಿಅಡಿ ವಂದಕ್ಕೆ 13 ಆಣ ; ಹೊನ್ನೆ 0—10—7; ಬೀಟೆ 0—10—6; ನಂದಿ 0—5—10; ಮತ್ತಿ 0—6—11 ಈ ಮೇರೆ ದರಗಳಲ್ಲಿ ಮಾರಲ್ಪಟ್ಟವು. ಷರತ್ ಎಂದಿನಂತೆ ವಳ್ಳಿದ್ದಾಗಿ ಹರಾಜು ಮುಂಚೆ ಓದಿ ತಿಳಿಸಲ್ಪಡುವದು.

ಎಫ್ ಜಿ. ಡಿಕೆ ಸ್ರ,
ಡೆಪ್ಯುಟಿ ಕನ್ಸರ್ವೇಟರ್, ಫಾರೆಸ್ಟ್.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ಮೆಂಟ್ ಆಫೀಸರಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು, ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಸೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸವುಳ್ಳ ಡಬ್ಬಿಗೆ ರೂ. 8—8—0; ಬಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಟೆಂಡೆಂಟರು ಇದರಡಿ